ಬಂದು ನಿಮಗೆ ಕೂಡ ತೊಂದರೆ ಕೊಡಬಹುದು. ಆದ್ದರಿಂದ ಈ ವ್ಯವಹಾರದ ವಿಷಯ ಯಾವುದೇ ಮೂರನೆಯ ವ್ಯಕ್ತಿಗೆ ತಿಳಿಯಬಾರದು ಎಂದು ನಾನು ಹೇಳಿದ್ದು. ನನ್ನ ಬಗ್ಗೆ ಯಾವುದೇ ವಿಷಯ, ಯಾವುದೇ ಮಾಹಿತಿ ನಿಮ್ಮಿಂದ ಹೊರಗೆ ಹೋಗಬಾರದು. ನನ್ನನ್ನು ನಿಮ್ಮ ಕುಟುಂಬದವನು ಎಂಬಂತೆ ಭಾವಿಸಿ. ನಿಮ್ಮ ಮೇಲೆ ನನಗೆ ಪೂರ್ಣ ವಿಶ್ವಾಸವಿದೆ. ನನಗೆ ಈಗ ಬೇಕಾಗಿದ್ದ ಮುಖ್ಯ ದಾಖಲೆಗಳನ್ನು ನೀವು ಕೊಟ್ಟಿದ್ದೀರಿ. ಇನ್ನು ಅಗತ್ಯವಿರುವ ಎಲ್ಲಾ ದಾಖಲೆಗಳನ್ನೂ ಒಂದು ತಿಂಗಳ ಒಳಗೆ ಸಿದ್ಧಪಡಿಸಿ ಇಡಿ. ಅದಕ್ಕಾಗುವ ಎಲ್ಲಾ ಖರ್ಚುಗಳನ್ನೂ ನಾನು ಕೊಡುತ್ತೇನೆ. ನಾಳೆಯೇ ನಾನು ಅಮೆರಿಕೆಗೆ ಹೋಗುತ್ತೇನೆ' ಎಂದ ನರಹರಿ.

'ನೀವು ಇಲ್ಲದಿರುವಾಗ ಆ ಕೆಟ್ಟ ಮನುಷ್ಯರು ಇಲ್ಲಿಗೆ ಬಂದರೆ?'

'ಅವರು ಇಲ್ಲಿಗೆ ಬರುವುದಿಲ್ಲ. ಯಾಕೆಂದರೆ, ನಾನು ಎಲ್ಲಿರುತ್ತೇನೆ ಎಂದು ಅವರಿಗೆ ತಿಳಿಯುವುದಿಲ್ಲ. ಅವರಿಗೆ ಈ ಊರು, ಊರಿನ ಹೆಸರು ತಿಳಿಯದು. ಆ ಇಬ್ಬರಲ್ಲಿ ಒಬ್ಬ ಮುಂಬಯಿಯಲ್ಲಿ ಇದ್ದಾನೆ. ಇನ್ನೊಬ್ಬ ರಷ್ಯಾದಲ್ಲಿ ಇದ್ದಾನೆ. ಅವರ ಬಗ್ಗೆ ನೀವು ಚಿಂತಿಸುವ ಅಗತ್ಯವಿಲ್ಲ. ಏನೇ ಸಮಸ್ಯೆ ಉಂಟಾಗಲಿ, ನನಗೆ ತಿಳಿಸಿ. ಕೂಡಲೇ ನಾನು ಬರುತ್ತೇನೆ. ಸ್ವಲ್ಪ ಕಾಲದಲ್ಲೇ ನಾನು ಹೆಂಡತಿ ಮಕ್ಕಳ ಜೊತೆ ಇಲ್ಲಿಗೆ ಬರುತ್ತೇನೆ. ಬರುವ ಮೊದಲು ನಿಮಗೆ ತಿಳಿಸುತ್ತೇನೆ' ಎಂದು ನರಹರಿ ಹೇಳಿದ.

9

ಅಮೆರಿಕೆಗೆ ಮರಳಿದ ನರಹರಿ ಶಾಲ್ಮಲಿ, ಅಭಿ ಮತ್ತು ಸುಕೃತಿಯ ಮುಂದೆ ನಿಧಾನವಾಗಿ, ಭಾವುಕತನವಿಲ್ಲದ ತಣ್ಣಗಿನ ಮಾತಿನಲ್ಲಿ, ತಮ್ಮ ಕುಟುಂಬದ ವಾಸಕ್ಕೆ ನಿರ್ಮಾಣ ಆರಂಭಿಸಿರುವ ಮನೆ ಮತ್ತು ಅದರ ಸುತ್ತ ಇರುವ ಸುಂದರವಾದ ಪ್ರಕೃತಿಯ ಆಕರ್ಷಕ ನೀಲ ನಕ್ಷೆಯನ್ನು  ಹರಡಿದ. 'ಅಭಿ ಮತ್ತು ಸುಕೃತಿಗೆ ಮದುವೆಯಾಗಬೇಕಾದ ಪ್ರಾಯ ಆಗಿದೆ. ಸ್ವಲ್ಪ  ಅಂತರದಲ್ಲಿ ಸುಕೃತಿ ಮತ್ತು ಅಭಿಯ ಮದುವೆ ನಡೆಯಬೇಕು ಎಂಬ ಯೋಚನೆ ನನ್ನದು. ನೀವು ಸಂಪಾದನೆಗೋಸ್ಕರ ಅಮೆರಿಕೆಯಲ್ಲಿ ಇರಬೇಕಾಗಿಲ್ಲ. ನೀವು ಭಾರತದಲ್ಲಿಯೇ ಒಳ್ಳೆಯ ಉದ್ಯೋಗ ಮಾಡಬಹುದು. ಇನ್ನೆರಡು ತಿಂಗಳಲ್ಲಿ ನಾವು ಭಾರತಕ್ಕೆ ಹೋಗೋಣ' ಎಂದು ತುಸು ತಡೆದು, 'ನಾನು ಆಯ್ಕೆ ಮಾಡಿದ ಹಚ್ಚ ಹಸುರಿನ ಸುಂದರವಾದ ಜಾಗ ನಿಮಗೆ ಇಷ್ಟವಾಗುತ್ತದೆ ಎಂದು ನಾನು ನಂಬಿದ್ದೇನೆ. ಫಲಭರಿತವಾದ ಗಿಡಮರಗಳು, ಬೇಕಾದಷ್ಟು ನೀರು, ಒಳ್ಳೆಯ ಗಾಳಿ ಸದಾ ಕಾಲ ಇರುತ್ತದೆ.; ಈ ಭೂಮಿಯ ಮೇಲೆ ಅಂಥ ಒಂದು ನಿಸರ್ಗರಮಣೀಯ ತಾಣದಲ್ಲಿ ನಾನು ಮತ್ತು ನನ್ನ ಕುಟುಂಬ ಆನಂದವಾಗಿ ಬದುಕಬೇಕು ಎಂಬುದು ನನ್ನ ಕನಸಾಗಿತ್ತು. ಐದು ಎಕರೆ ಜಾಗ ಕೊಂಡುಕೊಂಡಿದ್ದೇನೆ. ಆ ಜಾಗದ ಒಡೆಯರ ಬಳಿ ಇನ್ನೂ ಬಹಳ ಜಮೀನು ಇದೆ. ಬೆಲೆ ಕೂಡ ಕಡಿಮೆ. ನಿಮಗೆ ಇನ್ನೂ ಐದೋ ಹತ್ತೋ ಎಕರೆ ಬೇಕೆಂದಾದರೆ ಕೊಡಬಹುದು ಎಂದಿದ್ದಾರೆ. ಮನೆ ಬೇಗನೆ ಸಿದ್ಧವಾಗುತ್ತದೆ. ಒಬ್ಬ ಒಳ್ಳೆಯ ಇಂಜಿನಿಯರ್ ಮತ್ತು ಅವನ ಸಹಾಯಕ ಮನೆಯ ನಿರ್ಮಾಣದ ಕೆಲಸ ಮಾಡುತ್ತಿದ್ದಾರೆ. ನಾವು ನೇರವಾಗಿ ಆ ಮನೆಗೇ ಹೋಗುತ್ತೇವೆ. ಬಹಳ ದುಃಖಕರವಾದ ಅನುಭವದಿಂದಾಗಿ ನನ್ನ ಮತ್ತು ನಿಮ್ಮ ಹೃದಯ ಮನಸ್ಸುಗಳಲ್ಲಿ ಒಂದಷ್ಟು ನೋವು ಇದೆ. ಅದೆಲ್ಲವನ್ನೂ ತೊರೆದು, ನಾವು ನಾಲ್ವರೂ ಒಂದೇ ಬಳ್ಳಿಯ ಹೂವುಗಳಂತೆ ಶಾಂತಿ ಸಮಾಧಾನದಿಂದ ಬದುಕಬೇಕು ಎಂಬ ಆಸೆ ನನ್ನದು ಮತ್ತು ನಿಮ್ಮ ಅಮ್ಮನದು. ನಿಮಗೆ ಬದುಕಿನಲ್ಲಿ ಯಾವುದೇ ಕಹಿ ಅನುಭವ ಆಗಿಲ್ಲ. ಇನ್ನೂ ಆಗುವುದಿಲ್ಲ ಎನ್ನುವುದು ನನ್ನ ನಂಬಿಕೆ' ಎಂದು ನರಹರಿ ಸ್ವಲ್ಪ ಹೊತ್ತು ಧ್ಯಾನದಲ್ಲಿದ್ದು ಅನಂತರ ತಲೆಯೆತ್ತಿ ಶಾಲ್ಮಲಿ, ಅಭೀ ಮತ್ತು ಸುಕೃತಿಯ ಮುಖ ನೋಡಿದ. ಮೂವರ ಮುಖದಲ್ಲಿಯೂ ಅವನಿಗೆ ಕಾಣಿಸಿದ್ದು ಒಂದು ಬಗೆಯ ನಿರ್ಲಿಪ್ತತೆ. ಆ ನಿರ್ಲಿಪ್ತತೆಯನ್ನು ನರಹರಿ ನಿರೀಕ್ಷಿಸಿರಲಿಲ್ಲ. ಅವನು ಕಣ್ಣು ಮುಚ್ಚಿ ಕುಳಿತುಕೊಂಡ. ನರಹರಿಯ ಮುಖದಲ್ಲಿ ಪ್ರಸನ್ನತೆಯಿತ್ತು. ಈ ಮನುಷ್ಯನನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಎಂದೆನಿಸಿತು ಅಭಿ ಮತ್ತು ಸುಕೃತಿಗೆ.

ಒಂದು ದಿನ ಸುಕೃತಿ ಅಭಿಯೊಡನೆ ಮಾತಾಡುತ್ತಾ 'ಅಪ್ಪನಿಗೆ ಅಮೆರಿಕೆಯಲ್ಲೂ ಇರಲಾಗುವುದಿಲ್ಲ, ನಮ್ಮನ್ನು ಬಿಟ್ಟು ಭಾರತಕ್ಕೆ ಹೋಗಲೂ ಆಗುವುದಿಲ್ಲ. ಅವರು ಹೆಚ್ಚು ಹೆಚ್ಚು ಮೌನಿಯಾಗುತ್ತಿದ್ದಾರೆ, ಕೆಲವು ಸಲ ಸ್ವಲ್ಪ ಮಟ್ಟಿಗೆ ಮಾನಸಿಕ ಸ್ಥಿಮಿತ ಕಳೆದುಕೊಂಡಿರುವಂತೆ ವರ್ತಿಸುತ್ತಿದ್ದಾರೆ' ಎಂದಳು. ನೀನು ಅಪ್ಪನ ಬಗ್ಗೆ ಹಾಗೆಲ್ಲ ಭಾವಿಸಬಾರದು ಎಂದು ಹೇಳಬೇಕನಿಸಿತು ಅಭಿಗೆ.

ವಿಷಯ ಏನೇ ಇರಲಿ, ತಕ್ಷಣ ವಾದಕ್ಕೆ ಸಿದ್ಧಳಾಗುವ ಸುಕೃತಿಗೆ ಏನೂ ಹೇಳುವುದು ಬೇಡ ಎಂದುಕೊಂಡರೂ ಮನಸ್ಸಿನಲ್ಲಿರುವ ಒಂದು ಸಂದೇಹವನ್ನು ಹೊರಗೆಡಹುವುದು ಅಗತ್ಯ ಎಂದೆನಿಸಿ, ಸ್ವಲ್ಪ ಹೊತ್ತಿನ ಮೌನದ ಬಳಿಕ ಅಭಿ ಮಾತಾಡಿದ, 'ಯಾಕೆ ಸುಕೃತಿ, ಯಾವತ್ತಿನಿಂದ ನಿನಗೆ ಹಾಗನಿಸುತ್ತಿದೆ?'ಎಂದು ಕೇಳಿದ. ಬಹುಶಃ ಅವಳು ಕರುಣಾನಿಧಿಯೊಡನೆ ತಿರುಗಾಡುವುದನ್ನು ಅಪ್ಪ ಕಂಡಿರಬಹುದು ಎಂಬ ಸಂದೇಹ ಅಭಿಗೆ ಉಂಟಾಯಿತು.

'ಯಾವಾಗಲೋ ಉಂಟಾಯಿತು, ಯಾಕೆ ಅಂತ ಗೊತ್ತಿಲ್ಲ' ಎಂದು ಸುಕೃತಿ ಮಾತನ್ನು ಮೊಟಕುಗೊಳಿಸಿದಳು.

ಕೆಲ ದಿನಗಳ ಬಳಿಕ ನರಹರಿ ಹೆಂಡತಿ ಮತ್ತು ಮಕ್ಕಳೊಡನೆ, 'ಈ ವರ್ಷ ಸೆಪ್ಟೆಂಬರದಲ್ಲಿ ನಾವೆಲ್ಲರೂ ಭಾರತಕ್ಕೆ ಹೋಗೋಣ. ಒಂದು ತಿಂಗಳಿದ್ದು ಬರೋಣ' ಎಂದ.

'ಒಂದು ತಿಂಗಳು! ಅಷ್ಟು ಕಾಲ ನಾವು ಭಾರತದಲ್ಲಿ ಕಳೆಯುವುದು ಹೇಗೆ?' ಎಂದಳು ಸುಕೃತಿ.

'ಭಾರತದಲ್ಲಿ ನೀವು ನೋಡದ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳನ್ನು ನೋಡಬಹುದು' ನರಹರಿಯೆಂದ.

'ಭಾರತದಲ್ಲಿ ಅಷ್ಟೊಂದು ಪ್ರೇಕ್ಷಣೀಯ ಸ್ಥಳಗಳಿವೆಯೆ? ಅಮೆರಿಕೆಯಲ್ಲಿರುವುದಕ್ಕಿಂತ ಹೆಚ್ಚು ಸುಂದರ ಸ್ಥಳಗಳು ಭಾರತದಲ್ಲಿ ಇರಲು ಸಾಧ್ಯವೇ ಇಲ್ಲ' ಎಂದು ಸುಕೃತಿ ಮುಖ ಸಿಂಡರಿಸಿದಳು.

ಮಕ್ಕಳೊಡನೆ ನರಹರಿಯ ಮಾತು ಇಂಗ್ಲಿಷಿನಲ್ಲಿ ನಡೆಯುತ್ತಿತ್ತು. ಕನ್ನಡ ಭಾಷೆ ಹೇಗಿದೆ ಎಂದೇ ಅವರಿಗೆ ಗೊತ್ತಿರಲಿಲ್ಲ. 'ಕನ್ನಡ' ಎಂದರೆ ಸುಕೃತಿ ಮುಖ ಅತ್ತ ತಿರುಗಿಸುತ್ತಿದ್ದಳು. ಅಭಿ ಮಾತ್ರ ಏನೂ ಹೇಳುತ್ತಿರಲಿಲ್ಲ. ಯಾವ ಭಾವ ವಿಕಾರವೂ ಇಲ್ಲದೆ ಸುಮ್ಮನಿರುತ್ತಿದ್ದ.

'ಭಾರತದ ಜನರೊಡನೆ ನಾವು ಯಾವ ಭಾಷೆಯಲ್ಲಿ ಮಾತಾಡುವುದು?' ಸುಕೃತಿ ಕೇಳಿದಳು.

'ಅಲ್ಲಿ ನೀವು ಎಲ್ಲರೊಡನೆ ಮಾತಾಡಬೇಕಾದ ಅಗತ್ಯ ಉಂಟಾಗುವುದಿಲ್ಲ. ಅಲ್ಲಿ ಇಂಗ್ಲಿಷ್ ಮಾತಾಡಬಲ್ಲ ಮಂದಿ ತುಂಬಾ ಇದ್ದಾರೆ' ಎಂದ ನರಹರಿ.

'ಏನಿದ್ದರೂ ಈ ಸೆಪ್ಟೆಂಬರದಲ್ಲಿ ನಾನು ಬರುವುದಿಲ್ಲ. ನನಗೆ ತುಂಬಾ ಕೆಲಸ ಇದೆ' ಎಂದಳು ಸುಕೃತಿ.

'ಭಾರತದ ಬಹಳ ಸುಂದರ ಸ್ಥಳಗಳನ್ನು ನಾನು ಟೀವಿಯ ಮೇಲೆ ನೋಡಿದ್ದೇನೆ. ಅಲ್ಲಿನ ಹಬ್ಬಗಳ ಆಚರಣೆ, ಮದುವೆಗಳು ಮುಂತಾದವುಗಳನ್ನ ನೋಡಿದ್ದೇನೆ. ಭಾರತದ ಬಗ್ಗೆ ನನಗೆ ಬಹಳ ಕುತೂಹಲವಿದೆ. ನಾನು ಅಪ್ಪ ಅಮ್ಮನ ಜೊತೆ ಹೋಗುತ್ತೇನೆ' ಅಭಿಯೆಂದ.

'ಅಪ್ಪಾ, ಭಾರತ ಮತ್ತು ಇಂಡಿಯಕ್ಕೆ ಏನು ವ್ಯತ್ಯಾಸ?' ಎಂದು ಕೇಳಿದಳು ಸುಕೃತಿ.

'ಎರಡೂ ಒಂದೇ. ಕೆಲವರು ಇಂಡಿಯ ಅನ್ನುತ್ತಾರೆ, ಕೆಲವರು ಭಾರತ ಅನ್ನುತ್ತಾರೆ. ನಾವು ನಮ್ಮ ಮಾತಿನಲ್ಲಿ ಎರಡು ಶಬ್ದಗಳನ್ನೂ ಬಳಸುತ್ತೇವೆ' ನರಹರಿಯೆಂದ.

'ನೀನು ಯಾವಾಗಲೂ ಭಾರತಕ್ಕೆ ಹೋಗಿ ಬರ್ತೇನೆ ಅಂತ ಹೇಳ್ತೀಯಲ್ಲ?. ಹಾಗಂದ್ರೆ ಏನು? ಇಡೀ ಭಾರತಕ್ಕೊ?'

'ಅಲ್ಲ ಸುಕೃತಿ. ಕೆಲವು ನಗರ ಮತ್ತು ಕೆಲವು ಹಳ್ಳಿಗಳಿಗೆ ಹೋಗಿ ಬರ್ತೇನೆ' ನರಹರಿಯೆಂದ.

## ಹಿತ್ತಾಳೆ ಕಿವಿ!

ಅವಳ
ಸರ
ಬಂಗಾರದ್ದು,
ಗೆಜ್ಜೆ
ಬೆಳ್ಳಿಯದ್ದು,
ಕಿವಿ
ಮಾತ್ರ
ಹಿತ್ತಾಳೆಯದ್ದು!

★ ಬಾಲು ಪಟಗಾರ

